ಸಾಕ್ಷಿಯನ್ನು ದಿನಾಂಕ 05-07-2022 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 2 ಮತ್ತು 6 ನೇ ಎದುರುದಾರರ ಪರ ಶ್ರೀ ಎಸ್.ಎ. ಪಿ. ವಕೀಲರಿಂದಃ**

ಈ ಅರ್ಜಿಯಲ್ಲಿ ಹೆಚ್ಚುವರಿಯಾಗಿ ಸೇರಿಸಿರುವ ಸ್ವತ್ತುಗಳ ಬೆಲೆ 1996-97 ನೇ ಸಾಲಿನಲ್ಲಿ ಅಂದಾಜು ಎಕರೆಗೆ ರೂ.4 ರಿಂದ 5 ಲಕ್ಷ ಇತ್ತು ಎನ್ನುವುದು ಸರಿಯಲ್ಲ. ಸದರಿ ಆಸ್ತಿಗಳು ಅವುಗಳ ಈಗೀನ ಮಾಲೀಕರಿಗೆ ಯಾವ ರೀತಿ ಬಂತು ನಿಮಗೆ ಗೊತ್ತೆ ಎಂದರೆ ಸಾಕ್ಷಿ ಗೊತ್ತು ಎನ್ನುತ್ತಾರೆ.

3 ನೇ ಎದುರುದಾರಳಾದ ಗೌರಮ್ಮ ನನಗೆ ಅಜ್ಜಿಯಾಗಬೇಕು. 6 ನೇ ಎದುರುದಾರಳು ನನಗೆ ಸೋದರತ್ತೆಯಾಗಬೇಕು. ಸ.ನಂ.34/4 ರಲ್ಲಿರುವ 4 ಎಕರೆ 4 ಗುಂಟೆ ಜಮೀನು ಯಾರದ್ದು ಎಂದರೆ ಸಾಕ್ಷಿ ಅದು ನಮ್ಮ ಒಟ್ಟು ಕುಟುಂಬದ ಆಸ್ತಿ ಎನ್ನುತ್ತಾರೆ. ಸದರಿ ಆಸ್ತಿಯನ್ನು 3 ನೇ ಎದುರುದಾರಳು ನಿಡಗುಂದಾದ ಹುಸೇನ ಸಾಬ ಎಂಬುವವರಿಂದ ಖರೀದಿ ಮಾಡಿದ್ದಳು ಎಂದರೆ ಸಾಕ್ಷಿ ಸದರಿ ಆಸ್ತಿ ನಮ್ಮ ಒಟ್ಟು ಕುಟುಂಬದ ಆಸ್ತಿ ಯಾಗಿದ್ದು 3 ನೇ ಪ್ರತಿವಾದಿ ಆಸ್ತಿಯಲ್ಲಿ ಪಾಲು ಕೇಳಿದ್ದರಿಂದ ಸದರಿ ಸ್ವತ್ತನ್ನು ಮತ್ತು ಅದರ ಜೊತೆಗೆ ಮನೆ ನಂಬರ 1/53 ಮತ್ತು ಹೈದಾರಬಾದಿನಲ್ಲಿ ನಿವೇಶನ ಖರೀದಿಸಲು ಹಣವನ್ನು ನಮ್ಮ ಹಿರಿಯರು ಆಕೆಗೆ ಪಾಲು ಮಾಡಿ ಕೊಟ್ಟಿದ್ದಾರೆ ಎನ್ನುತ್ತಾರೆ. ಸದರಿ ಆಸ್ತಿಯನ್ನು ದಿನಾಂಕ 16-04-1982 ರಂದು ಗೌರಮ್ಮ ಹುಸೇನ ಸಾಬನಿಂದ ಖರೀದಿ ಮಾಡಿದಳು ಎಂದರೆ ಸರಿ. ಸದರಿ ಸಂದರ್ಭದಲ್ಲಿ 6 ನೇ ಎದುರುದಾರಳಾದ ನಾಗಮ್ಮ ಅಪ್ರಾಪ್ತೆಯಾಗಿದ್ದರಿಂದ ಅವಳ ಪರವಾಗಿ 3 ನೇ ಪ್ರತಿವಾದಿ ಸ.ನಂ.34/4 ರ ಆಸ್ತಿಯನ್ನು ಖರೀದಿ ಮಾಡಿದ್ದಳು ಎನ್ನುವುದು ಸರಿಯಲ್ಲ.

ಅಸಲು ದಾವಾ 24/1996 ರ ದಾವೆಗೆ ಈ ಅರ್ಜಿಯ 3 ಮತ್ತು 6 ನೇ ಎದುರುದಾರನ್ನು ಪಕ್ಷಗಾರರನ್ನಾಗಿ ಸೇರಿಸಲಾಗಿತ್ತು ಎಂದರೆ ಸಾಕ್ಷಿ 3 ನೇ ಎದುರುದಾರರನ್ನು ಸೇರಿಸಲಾಗಿತ್ತು 6 ನೇ ಎದುರುದಾರಳನ್ನು ಸೇರಿಸಿರಲಿಲ್ಲ ಎನ್ನುತ್ತಾರೆ. ಅಸಲು ದಾವಾ 24/1996 ರಲ್ಲಿ ಸ.ನಂ.34/4 ರ ಆಸ್ತಿಯನ್ನು ಸೇರಿಸಿರಲಿಲ್ಲ ಎಂದರೆ ಸಾಕ್ಷಿ 3 ನೇ ಎದುರುದಾರಳಿಗೆ ಸದರಿ ಜಮೀನನ್ನು ಮತ್ತು 1/53 ರ ಮನೆಯನ್ನು ಪಾಲಿನಲ್ಲಿ ಕೊಟ್ಟಿದ್ದರಿಂದ ಅವುಗಳನ್ನು ಅಸಲು ದಾವಾ 24/1996 ರಲ್ಲಿ ಸೇರಿಸಿರಲಿಲ್ಲ ಎನ್ನುತ್ತಾರೆ. ಅಸಲು ದಾವಾ 24/1996 ರಲ್ಲಿ ಸ.ನಂ.34/4 ರ ಜಮೀನನ್ನು ಸೇರಿಸದೇ ಸುಳ್ಳು ಡಿಕ್ರಿ

ಪಡೆದುಕೊಳ್ಳಲಾಗಿದೆ ಎನ್ನುವುದು ಸರಿಯಲ್ಲ. ಸ.ನಂ.34/4 ರ ಜಮೀನನ್ನು ಸೇರಿಸಿದರೆ ಅಸಲು ದಾವೆ 24/1996 ರ ದಾವೆ ಈ ನ್ಯಾಯಾಲಯದ ವ್ಯಾಪ್ತಿಗೆ ಬರುವುದಿಲ್ಲ ಎಂಬ ಕಾರಣಕ್ಕೆ ಸದರಿ ಅಸ್ತಿ ಸೇರಿಸಿರುವುದಿಲ್ಲ ಎನ್ನುವುದು ಸರಿಯಲ್ಲ.

ಕೃಷಿಯಿಂದ ನೀವೂ ಎಷ್ಟು ಆಸ್ತಿ ಗಳಿಸಿದ್ದೀರಿ ಎಂದರೆ ಸಾಕ್ಷಿ ನಾನು ವ್ಯಯಕ್ತಿಕವಾಗಿ ಏನು ಗಳಿಸಿಲ್ಲ ಎನ್ನುತ್ತಾರೆ. ಕೃಷಿಕರಿಗೆ ಯಾವುದೇ ಲಾಭಾದಾಯಕ ಆದಾಯ ಇರುವುದಿಲ್ಲ ಮತ್ತು ಅವರ ಆದಾಯ ಖರ್ಚಿಗೆ ಸರಿ ಹೊಗುತ್ತದೆ ಎಂದರೆ ಸಾಕ್ಷಿ ಕೆಲವು ವರ್ಗದ ಕೃಷಿಕರಿಗೆ ಮಾತ್ರ ಆ ರೀತಿ ಆದಾಯ ಇರುವುದಿಲ್ಲ ಎನ್ನುತ್ತಾರೆ. ಸಾಕ್ಷಿ ಸ್ವ-ಇಚ್ಛೆಯಿಂದ ನಮ್ಮ ತಂದೆಯವರಿಗೆ ಫಲವತ್ತಾದ ಹಲವಾರು ಎಕರೆ ಭೂಮಿ ಇದ್ದು ಅವರಿಗೆ ಸಾಕಷ್ಟು ಆದಾಯವಿದೆ ಎನ್ನುತ್ತಾರೆ. ನಿಮ್ಮ ತಂದೆಯವರಿಗೆ ಫಲವತ್ತಾದ ಹಲವಾರು ಎಕರೆ ಭೂಮಿ ಇದ್ದು ಅವರಿಗೆ ಸಾಕಷ್ಟು ಆದಾಯವಿದೆ ಎಂಬುದನು ತೋರಿಸಲು ದಾಖಲೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿಲ್ಲ ಮುಂದೆ ಕೊಡುತ್ತೇನೆ ಎನ್ನುತ್ತಾರೆ. ನನ್ನ ತಂದೆಗೆ ಮತ್ತು ನನಗೆ ಕೃಷಿಯಿಂದ ಯಾವುದೇ ಆದಾಯವಿಲ್ಲ ಹಾಗಾಗಿ ನಾವು ಯಾವುದೇ ಜಮೀನು ಖರೀದಿಸಿಲ್ಲ ಎನ್ನುವುದು ಸರಿಯಲ್ಲ.

ಈ ಅರ್ಜಿಯಲ್ಲಿ ಹೆಚ್ಚುವರಿಯಾಗಿ ಸೇರಿಸಿರುವ ಆಸ್ತಿಗಳನ್ನು ಯಾವ ಮೂಲಗಳಿಂದ ಖರೀದಿಸಲಾಗಿತ್ತು ಎಂಬುದನ್ನು ನಿಖರವಾಗಿ ನಾನು ಹೇಳಿಲ್ಲ ಎಂದರೆ ಸಾಕ್ಷಿ ನಮ್ಮ ಒಟ್ಟು ಕುಟುಂಬದ ಆದಾಯದಿಂದ ಸದರಿ ಆಸ್ತಿಗಳನ್ನು ಗಳಿಸಲಾಗಿದೆ ಎನ್ನುತ್ತಾರೆ. ನಮ್ಮ ಒಟ್ಟು ಕುಟುಂಬದ ಆದಾಯದಿಂದ ಸದರಿ ಆಸ್ತಿಗಳನ್ನು ಗಳಿಸಲಾಗಿದೆ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಮತ್ತು ಅಂತಿಮ ಡಿಕ್ರಿಗಾಗಿ ಸಲ್ಲಿಸಿರುವ ಅರ್ಜಿಯಲ್ಲಿ ಹೇಳಿಲ್ಲ ಎನ್ನುವುದು ಸರಿಯಲ್ಲ. ನಮ್ಮ ಒಟ್ಟು ಕುಟುಂಬದ ಆದಾಯದಿಂದ ಈ ಅರ್ಜಿಗೆ ಹೆಚ್ಚುವರಿಯಾಗಿ ಸೇರಿಸಿರುವ ಆಸ್ತಿಗಳನ್ನು ಗಳಿಸಲಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಎದುರುದಾರರಿಗೆ ಸತಾಯಿಸುವ ಉದ್ದೇಶದಿಂದ ಕಾಲಪರಿಮಿತಿ ಮೀರಿದ ಮತ್ತು ಕಾನೂನಿನಡಿ ಅನೂರ್ಜಿತವಾದ ಅಂತಿಮ ಡಿಕ್ರಿ ಅರ್ಜಿ ಸಲ್ಲಿಸಿ ಈಗ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ನಾನು ಪ್ರಾಪ್ತ ವಯಸ್ಕನಾಗಿ 9-10 ವರ್ಷ ಆಯಿತು ಎಂದರೆ ಸರಿ. ನಾನು ಎಂ.ಟೆಕ್.

ಓದಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. 2 ಮತ್ತು 6 ನೇ ಪ್ರತಿವಾದಿಯರು ಸ್ವಂತಕ್ಕೆ ಗಳಿಸಿರುವ ಆಸ್ತಿಗೂ, ನನಗೂ ಮತ್ತು ಇತರೆ ಪಕ್ಷಗಾರರಿಗೂ ಯಾವುದೇ ಸಂಬಂಧ ಇಲ್ಲ ಎನ್ನುವುದು ಸರಿಯಲ್ಲ. ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**